
ತಂತ್ರವನ್ನು ನೀರಮಾನ್ವಿ ಸಮರ್ಥವಾಗಿ ಬಳಸಿದ್ದಾರೆ. ‘ಬಿಸಲುಗುದುರೆ’, ‘ಎಂಥಾ ಮೋಜಿನ ಕುದುರಿ’, ‘ತಮಂಥ ಕಿರಿದೆನ್ನಬಹುದೇ ಅಯ್ಯಾ’ ಕಥೆಗಳಲ್ಲಿ ತೀವ್ರತೆ ಕಮ್ಮಿ. ಮೂರು ಕಥೆಗಳ ನಾಯಕರು ದುರ್ಬಲರಾಗಿ ತಮ್ಮ ಎದುರಾಳಿಗಳಿಂದ ಸೋಲುತ್ತಾರೆ. ದೌರ್ಬಲ್ಯವನ್ನು ವ್ಯಂಗ್ಯವಾಗಿ ಚಿತ್ರಿಸಿದರೂ ತೀವ್ರತೆ ತುಂಬಿಕೊಳ್ಳುವುದಿಲ್ಲ. ಪ್ರಜ್ಞಾಪ್ರವಾಹ ತಂತ್ರದಿಂದ, ವ್ಯಕ್ತಿ ಕೇಂದ್ರಿತವಾದ ನಿರೂಪಣೆಯನ್ನು ಕಲಾತ್ಮಕವಾಗಿ ಕಟ್ಟಿದಂತೆ, ಸಮಾಜ-ಸಮೂಹ ಕೇಂದ್ರಿತ ಪ್ರಜ್ಞೆಯ ಮೂಲಕ ಕಥೆ ಕಟ್ಟುವ ಇನ್ನೊಂದು ಆಯಾಮ ನೀರಮಾನ್ವಿ ಅವರ ಕಥೆಗಳಲ್ಲಿದೆ. ‘ಬೆತ್ತಲೆ ಸ್ವಾಮಿ’, ‘ಪ್ರಜಾಪ್ರಭುತ್ವದಲ್ಲಿ ಒಂದು ಸಾವು’, ‘ಗುಡಿಯ ನೋಡಿರಣ್ಣ’ ಮತ್ತು ‘ಕರ್ಪೂರದ ಕಾಯದಲ್ಲಿ ಬೆಂಕಿಯುಸಿರಾಟ’ ಕಥೆಗಳಲ್ಲಿ ವ್ಯಕ್ತಿ ಪ್ರಜ್ಞೆಗಿಂತ ಸಮೂಹ ಪ್ರಜ್ಞೆ ಇದೆ. ಸರ್ವಸಾಕ್ಷಿ ಪ್ರಜ್ಞೆಯ ನಿರೂಪಣೆಯಿದೆ. ವ್ಯಕ್ತಿಪ್ರಜ್ಞೆ ಮೂಲಕ ಲೋಕವನ್ನು ಗ್ರಹಿಸುವ ವಿಧಾನದ ಕಥೆಗಳು ಶಕ್ತವಾದ ತೀವ್ರತೆಯನ್ನು ಹೊಂದಿವೆ. ಸಮೂಹ ಪ್ರಜ್ಞೆಯ ಮೂಲಕ ಲೋಕವನ್ನು ಗ್ರಹಿಸುವ ಕಥೆಗಳು ನಿರೂಪಣೆಯಲ್ಲಿ ತೀವ್ರತೆಯನ್ನು ಕಮ್ಮಿ ಮಾಡಿಕೊಂಡು ಸೊರಗಿದಂತೆ ಕಾಣಿಸುತ್ತವೆ. ಹಾಗೆ ನೋಡಿದರೆ ಈ ನೆಲೆಯುಳ್ಳ ಕಥೆಗಳೇ ದೀರ್ಘವಾಗಿರಬೇಕಿತ್ತು. ಆದರೆ ಈ ಕಥೆಗಳು ಬೆಳೆಯುವುದಿಲ್ಲ. ವ್ಯಕ್ತಿಪ್ರಜ್ಞೆಯ ಕಥೆಗಳು ಬೆಳೆಯುತ್ತವೆ. ದೀರ್ಘವಾಗಿವೆ. ಇದು ಗುಣ ದೋಷಗಳಿಗಿಂತ ನೀರಮಾನ್ವಿ ಅವರ ಒಲವನ್ನು ಸೂಚಿಸುತ್ತದೆ. ಅಸ್ತಿತ್ವವಾದ, ವ್ಯಕ್ತಿ ವಿಶಿಷ್ಟವಾದದ ಹಿನ್ನೆಲೆಯುಳ್ಳ ಕಥೆಗಳು ಸಂಕೀರ್ಣವಾಗಿವೆ. ಲಂಕೇಶ್, ತೇಜಸ್ವಿ, ‘ನವ್ಯ’ದ ಜಾಡಿನಿಂದ ಹೊರ ಬಂದು, ಲೋಹಿಯಾ, ಅಂಬೇಡ್ಕರ್, ಗಾಂಧಿ ವಿಚಾರವಾದದ ಪ್ರಭಾವದಿಂದ ಕಥೆಗಳನ್ನು ಬರೆದರು. ಕನ್ನಡ ವಿಮರ್ಶೆಯ ಸಂದರ್ಭದಲ್ಲಿ ಇದನ್ನು ‘ಪರಿವರ್ತಿತ’ ನವ್ಯ ಎಂದು ಗುರುತಿಸಲಾಗಿದೆ. ಈ ಬಗೆಯ ಪಲ್ಲಟದಿಂದ ಅತ್ಯುತ್ತಮ ಕಥೆಗಳನ್ನು ಲಂಕೇಶ್, ತೇಜಸ್ವಿ ಬರೆದರು. ಈ ಪಲ್ಲಟವನ್ನು ನೀರಮಾನ್ವಿ ಅವರ ಕಥೆಗಳಲ್ಲಿ ಕಾಣಬಹುದು. ಆದರೆ ಅವು ಅತ್ಯುತ್ತಮ ಕಥೆಗಳಾಗಿ ನಿಂತಿಲ್ಲ. ‘ಬೆತ್ತಲೆ ಸ್ವಾಮಿ’, ‘ಗುಡಿಯ ನೋಡಿರಣ್ಣ’, ‘ಪ್ರಜಾಪ್ರಭುತ್ವದಲ್ಲಿ ಒಂದು ಸಾವು’, ‘ಕರ್ಪೂರದ ಕಾಯದಲ್ಲಿ ಬೆಂಕಿಯುಸಿರಾಟ’ ಕಥೆಗಳಲ್ಲಿ ಸಮಾಜವಾದ, ಮಾನವೀಯತೆ, ಸಾಮಾಜಿಕ ನ್ಯಾಯ, ಶೋಷಣೆ, ಅನ್ಯಾಯ ವಿಚಾರಗಳು ಕಾಣಿಸುತ್ತವೆ. ನಿರೂಪಣಾ ಶೈಲಿ ನವ್ಯವೇ. ಒಳ ತಿರುಳು ಅಥವಾ ಕಥಾ ವಸ್ತುಗಳಿಗೆ ಬಹು ಆಯಾಮಗಳಿವೆ. ಸಮಾಜವಾದದ ನೆಲೆಯಿದ್ದರೂ ಹೊಂದಾಣಿಕೆಯಲ್ಲಿ ಕಥೆಗಳು ಕಲೆಯಾಗಿ ಮೂಡಿ ನಿಂತಿಲ್ಲ. ‘ಗುಡಿಯ ನೋಡಿರಣ್ಣ’ ಈ ಬಗೆಯ ಕೊರತೆ ಇದ್ದರೂ ಅಚ್ಚುಕಟ್ಟಾದ ಕಥೆ.




ಕನ್ನಡ ಕಥನ ಸಾಹಿತ್ಯ ಸಂದರ್ಭದಲ್ಲಿ ನೀರಮಾನ್ವಿ ಅವರ ಕಥನ ತಂತ್ರ ವಿಶೇಷವಾದದ್ದು. ಕಥೆಗಳ ಮಟ್ಟಿಗಂತೂ ವಿಶೇಷ. ಭೂತ ವರ್ತಮಾನವನ್ನು ತೊಡಕಿಲ್ಲದಂತೆ ನಿರ್ವಹಿಸುವುದು, ಸನ್ನಿವೇಶ ಸಂದರ್ಭಗಳ ನಿರ್ಮಾಣ, ಭಾಷೆ ಉಪಭಾಷೆಗಳ ಬಳಕೆ, ಕಾಲದ ನಿರ್ವಹಣೆ ಎಲ್ಲವೂ ಸಂಕೀರ್ಣವಾಗಿ ವ್ಯಕ್ತವಾಗುತ್ತವೆ.

ರಾಯಚೂರಿನ ಆಡುಭಾಷೆ ಮತ್ತು ಅದನ್ನೇ ಗ್ರಾಂಥಿಕ ಭಾಷೆಯನ್ನಾಗಿ ಪುನರ್ ಸೃಷ್ಟಿಸಿಕೊಳ್ಳುವಿಕೆ, ಅಂದರೆ ಮಾತು ಮತ್ತು ವಿವರಣೆಗೆ ಬಳಸುವ ಪರಿ ಅನನ್ಯ. ರಾಯಚೂರು ಪ್ರಾಂತದ ಭಾಷೆಯನ್ನು ನೀರಮಾನ್ವಿ ಬಳಸಿದಂತೆ, ಮತ್ತ್ಯಾರೂ ಈ ಭಾಗದ ಕಥನಕಾರರು ಬಳಸಿಲ್ಲ. ●